


# ಕಳೆದ ದಿನಗಳ ನೆನಪುಗಳು



(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)

ಮೂಲ ಬಂಗಾಳಿ: ಸ್ವಾಮಿ ಶ್ರದ್ಧಾನಂದ

ಅನುವಾದ: ಪ್ರವ್ರಾಜಿಕಾ ಯೋಗಾತ್ಮಪ್ರಾಣಾ

## ಭಾಗ ೩೦

**ಈ** ರೀತಿ ಶತಮಾನೋತ್ಸವ ಹಾಗೂ ಸಾಧು ಸಮ್ಮೇಳನಗಳು ಮುಗಿದ ನಂತರ ವಿರಜಾನಂದರಿಗೆ ನಾಲ್ಕೂವರೆ ತಿಂಗಳ ರಜೆ ಲಭಿಸಿತು. ಸ್ವಾಮಿ ಶಂಕರಾನಂದರು ಹಂಗಾಮಿ ಸೆಕ್ರೆಟರಿಯಾಗಿ ನೇಮಕಗೊಂಡರು. ವಿರಜಾನಂದರು ಕಾಶಿಯಲ್ಲಿ ಎರಡು ದಿನಗಳನ್ನು ಕಳೆದು, ಮೇ ೩೦ರಂದು ಶ್ಯಾಮಲಾತಾಲ್ ತಲುಪಿದರು. ಅಕ್ಟೋಬರ್ ಪ್ರಾರಂಭದಲ್ಲಿ ಮಾಯಾವತಿಗೆ ಹೋಗಿ ಎರಡು ವಾರಗಳನ್ನು ಕಳೆದರು. ಅಲ್ಲಿಯ ಆದರಾತಿಥ್ಯದಿಂದಾಗಿ ಈ ೧೫ ದಿನಗಳಲ್ಲೇ ಅವರ ತೂಕ ೯ ಪೌಂಡುಗಳಷ್ಟು ಹೆಚ್ಚಿತು. ಅಕ್ಟೋಬರ್ ಕೊನೆಯ ಭಾಗದಲ್ಲಿ ಎರಡು ಶೋಕ ವಾರ್ತೆಗಳು ಕೇಳಿಬಂದವು. ಅಕ್ಟೋಬರ್ ೪ರಂದು ಸ್ವಾಮಿ ಸೋಮಾನಂದರು ಮದ್ರಾಸಿನಲ್ಲಿ ತಮ್ಮ ದೇಹವನ್ನು ತ್ಯಜಿಸಿದ್ದರು. ಅವರಿಗೆ ೬೫ ವರ್ಷಗಳಾಗಿತ್ತು. ಅಕ್ಟೋಬರ್ ೨೦ರಂದು ಮುಸೌರಿಯಲ್ಲಿ ಸ್ವಾಮಿ ಕಲ್ಯಾಣಾನಂದರು ಸಮಾಧಿಯನ್ನಪ್ಪಿದ್ದರು. ಇವರೀರ್ವರೂ ಸ್ವಾಮೀಜಿಯವರ ಶಿಷ್ಯರು. ಸೋಮಾನಂದರು ಆಂಧ್ರ ಪ್ರದೇಶದವರು. ಇವರು ಪಾಶ್ಚಾತ್ಯ ದೇಶಗಳಿಂದ ಹಿಂದಿರುಗಿದ ಸ್ವಾಮಿ ವಿವೇಕಾನಂದರನ್ನು ೧೮೯೮ರ ಜುಲೈಯಲ್ಲಿ ಕಾಶ್ಮೀರದಲ್ಲಿ ಸಂಧಿಸಿದ್ದರು. ಬೇಲೂರು ಮಠದಲ್ಲಿ ಸ್ವಾಮೀಜಿಯವರ ಪುಣ್ಯ ಸಂಸರ್ಗದಲ್ಲಿ ಕೆಲವು ದಿನಗಳಿದ್ದರು. ಇವರ ಜೀವನದ ಹೆಚ್ಚಿನ ಭಾಗವು ದಕ್ಷಿಣ ಭಾರತದಲ್ಲೇ ಕಳೆಯಿತು. ಆಗಿನ ಮಹಿಷೂರು ರಾಜ್ಯ (ಈಗಿನ ಕರ್ನಾಟಕ) ಬೆಂಗಳೂರಿನಲ್ಲಿ ಕಾರಾಗೃಹದ ಖೈದಿಗಳಿಗೆ ಧಾರ್ಮಿಕ ವಿಷಯಗಳ ಬಗ್ಗೆ ಮಾತನಾಡುವುದು ಇವರ ನಿಯತ ಕೆಲಸಗಳಲ್ಲೊಂದಾಗಿತ್ತು.

ಸ್ವಾಮಿ ಕಲ್ಯಾಣಾನಂದರು ೧೮೯೮ರಲ್ಲಿ ಮಠವನ್ನು ಸೇರಿದ ಮರುವರ್ಷವೇ ಸ್ವಾಮಿ ವಿವೇಕಾನಂದರಿಂದ ಸಂನ್ಯಾಸದೀಕ್ಷೆಯನ್ನು ಪಡೆದರು. ಕಂಖಲ್‌ನಲ್ಲಿ ರಾಮಕೃಷ್ಣ ಮಿಷನ್ ಸೇವಾಶ್ರಮವನ್ನು ಸ್ಥಾಪಿಸಿದ ಖ್ಯಾತಿ ಇವರಿಗೆ ಸಲ್ಲುತ್ತದೆ. ಈ ಕಾರ್ಯದಲ್ಲಿ ಅವರಿಗೆ ತಮ್ಮ ಹೆಗಲುಕೊಟ್ಟ ಮತ್ತೊಬ್ಬರೇ ಸ್ವಾಮೀಜಿಯವರ ಮರಾಠಿಗ ಶಿಷ್ಯ ಸ್ವಾಮಿ ನಿಶ್ಚಯಾನಂದರು. ಕಲ್ಯಾಣಾನಂದರು ತಮ್ಮ ೬೩ನೇ ವಯಸ್ಸಿನಲ್ಲಿ ದೇಹತ್ಯಾಗ ಮಾಡಿದ್ದರು. ಗುರುವೇ ಸರ್ವಸ್ವವಾಗಿದ್ದ ಇವರಂತಹ ದಣಿವರಿಯದ ಕರ್ಮಯೋಗಿಯ ಸ್ಥಾನವನ್ನು ಮರುತುಂಬುವುದು ಅಸಾಧ್ಯವೇ ಸರಿ. ಐದು ವರ್ಷಗಳ ಹಿಂದೆ ವಿರಜಾನಂದರು ಇವರನ್ನು ಶ್ಯಾಮಲಾತಾಲ್ ಮತ್ತು ಮಾಯಾವತಿಯಲ್ಲಿ ಸಂಧಿಸಿದ್ದರು. ಗುರುಭಾಯಿಗಳಾದ ಇವರ ಮಿಲನವು ಹಿಂದಿನ ದಿನಗಳ ಮಧುರ ನೆನಪನ್ನು ತಂದು ಆನಂದ ನೀಡಿತ್ತು.

ಶ್ಯಾಮಲಾತಾಲ್ ಆಶ್ರಮದ ಹಾಗೂ ಆಸ್ಪತ್ರೆಯ ದಿನನಿತ್ಯದ ಕೆಲಸಗಳನ್ನು ನಡೆಸಿಕೊಂಡು ಹೋಗಲು ಸದಸ್ಯರ ಅಗತ್ಯವು ಇದ್ದೇ ಇದ್ದಿತು. ಅದಕ್ಕಾಗಿ ನವೆಂಬರ್‌ನಲ್ಲಿ ಇಬ್ಬರು ಸಂನ್ಯಾಸಿಗಳು ಅಲ್ಲಿಗೆ ತಲುಪಿದರು. ಅದರಲ್ಲಿ ಸಾಮಾನ್ಯ ಕೆಲಸಗಳನ್ನು ನೋಡಿಕೊಳ್ಳುವ ಸಲುವಾಗಿ ಸ್ವಾಮಿ ಅಪೂರ್ವಾನಂದರು ಮತ್ತು ಆಸ್ಪತ್ರೆಗಾಗಿ ಚಿಕಿತ್ಸೆಯಲ್ಲಿ ನುರಿತ ಕಿರಿಯ ಸಂನ್ಯಾಸಿಗಳೊಬ್ಬರು. ಇದರಿಂದಾಗಿ ವಿರಜಾನಂದರು ನಿಶ್ಚಿಂತರಾದರು. ವಿರಜಾನಂದರು ಶ್ಯಾಮಲಾತಾಲ್‌ನಲ್ಲಿರುವಾಗಲೇ ಇನ್ನೊಂದು ದುಃಖವಾರ್ತೆಯನ್ನು ಕೇಳಿದರು. ಶಿಕಾಗೋ ವೇದಾಂತ ಸಮಿತಿಯ ಸ್ಥಾಪಕರೂ, ಅಧ್ಯಕ್ಷರೂ ಆಗಿದ್ದ ಸ್ವಾಮಿ ಜ್ಞಾನೇಶ್ವರಾನಂದರು ತಮ್ಮ ೪೫ನೇ ವಯಸ್ಸಿನಲ್ಲಿ ಹೃದ್ರೋಗಕ್ಕೆ ತುತ್ತಾಗಿ ದೇಹತ್ಯಾಗ ಮಾಡಿದ್ದರು. ಅವರಂತಹ ಬಹುಮುಖ ಪ್ರತಿಭೆಯುಳ್ಳ ಸಂನ್ಯಾಸಿಗಳು ಅತಿ ವಿರಳ. ೧೯೨೭ರಲ್ಲಿ ಅವರನ್ನು ಅಮೇರಿಕೆಯ ಪ್ರಚಾರಕಾರ್ಯಕ್ಕಾಗಿ ಕಳುಹಿಸಲಾಗಿತ್ತು. ೧೯೩೪ರಲ್ಲಿ ಕೆಲವು ತಿಂಗಳಿಗೋಸ್ಕರ ಅವರು ಭಾರತಕ್ಕೆ ಬಂದಿದ್ದರು. ಅವರ ಅಭಿಮಾನಶೂನ್ಯತೆ, ಸದಾ ಪ್ರಫುಲ್ಲವಾದ ಮುಖ ಬಿಚ್ಚುಮನಸ್ಸಿನ ಸರಳ ವ್ಯವಹಾರ ಸಹಜವಾಗಿ ಮರೆಯಲಾಗದ್ದು.

ವಿರಜಾನಂದರು ೧೯೩೭ರ ೮ನೇ ಡಿಸೆಂಬರ್ ಶ್ಯಾಮಲಾತಾಲ್‌ನಿಂದ ಬೇಲೂರು ಮಠಕ್ಕೆ ಹಿಂತಿರುಗಿದರು. ಅಲ್ಲಿ ಹೊಸ ಮಂದಿರದ ನಿರ್ಮಾಣ ಕಾರ್ಯವು ಮುಗಿಯುತ್ತ ಬಂದಿತ್ತು. ಅದರ ನಯನಮನೋಹರವಾದ ಹಿರಿದಾದ ಗೋಪುರವನ್ನೂ, ಸುರಚಿತವಾದ ಮಂದಿರದ ಶಿಲ್ಪವನ್ನೂ ದೂರದಿಂದ ನೋಡಿಯೇ ವಿರಜಾನಂದರ ಮನವು ಅಪೂರ್ವ ಉಲ್ಲಾಸದಿಂದ ತುಂಬಿ ಹೋಯಿತು. ಮಠಾಧ್ಯಕ್ಷರಾದ ಸ್ವಾಮಿ ವಿಜ್ಞಾನಾನಂದರ ಸ್ವಾಸ್ಥ್ಯ ಸ್ವಲ್ಪವೂ ಚೆನ್ನಾಗಿರಲಿಲ್ಲ. ಈ ಪ್ರಪಂಚದಲ್ಲಿ ತಮ್ಮ ಕೆಲಸ ಮುಗಿಯುತ್ತ ಬಂದಿರುವುದು ಅವರ ಮನಸ್ಸಿಗೆ ಗೋಚರವಾಗುತ್ತಿತ್ತು. ಹಾಗೂ ಇದನ್ನು ಹಲವರಲ್ಲಿ ವ್ಯಕ್ತಪಡಿಸಿಯೂ ಇದ್ದರು. 'ಮಂದಿರ ನಿರ್ಮಾಣದ ಕೆಲಸವು ಮುಗಿಯುತ್ತಿದ್ದಂತೆಯೇ ಅದರಲ್ಲಿ ಶ್ರೀರಾಮಕೃಷ್ಣರ ಅಮೃತಶಿಲೆಯ ಮೂರ್ತಿಯನ್ನು ಪ್ರತಿ

ಸ್ಥಾಪಿಸಿದ ಮೇಲೆ ತಮಗೆ ಮುಕ್ತಿ' ಎಂದು ಹೇಳುತ್ತಿದ್ದರು. ಸ್ವಾಮೀಜಿಯವರು ಇರುವಾಗ ವಿಜ್ಞಾನಾನಂದರ ಸಹಾಯ ದಿಂದಲೇ ಮಂದಿರದ ನಕ್ಷೆಯನ್ನು ತಯಾರಿಸಿದ್ದರು. ಮಂದಿರದ ಮತ್ತು ಪ್ರತಿಷ್ಠಾಪನೆಯ ಕೆಲಸವನ್ನು ಆದಷ್ಟು ಬೇಗ ಮಾಡಿ ಮುಗಿಸಬೇಕೆಂದು ಪೂಜ್ಯ ವಿಜ್ಞಾನಾನಂದರು ಮತ್ತೆ ಮತ್ತೆ ತಾಕೀತು ಮಾಡುತ್ತಿದ್ದರು. ಅದಕ್ಕಾಗಿ ಹಗಲೂ-ರಾತ್ರಿ ಕೆಲಸ ನಡೆಯತೊಡಗಿತು. ಬರಲಿರುವ ಮಕರ ಸಂಕ್ರಾಂತಿಯಂದು ಮಂದಿರದ ಪ್ರತಿಷ್ಠಾಪನೆ ಎಂದು ನಿರ್ಣಯಿಸಲಾಯಿತು. ಮಂದಿರದ ನಿರ್ಮಾಣ ಪೂರ್ತಿಯಾಗದಿದ್ದರೂ, ಗರ್ಭಗುಡಿಯ ಕೆಲಸ ಅಷ್ಟರೊಳಗೆ ಪೂರ್ಣಗೊಳ್ಳುವುದು. ಒಂದು ದಿನ (ಡಿಸೆಂಬರ್ ೯, ೧೯೩೭) ಬೇಲ್‌ಪುರದ ಶಾಂತಿನಿಕೇತನದಿಂದ ಕಲಾವಿದರಾದ ನಂದಲಾಲ್ ಬಸು ಅವರು ಬಂದು ವೇದಿಕೆಯ ಮೇಲ್ಕಟ್ಟು (ಚಂದ್ರಾತಪ) ಮತ್ತು ಹಿಂದಿನ ಪರದೆಯ ಬಗ್ಗೆ ಕೆಲವು ಅಮೂಲ್ಯವಾದ ಸಲಹೆಗಳನ್ನಿತ್ತರು.

ಶಿಲಾಂಗ್ ಮತ್ತು ಖಾಸಿಯಾ ಪರ್ವತದ ಶ್ರೀರಾಮಕೃಷ್ಣ ಆಶ್ರಮದ ಸ್ಥಾಪಕರಾದ ದಣಿವರಿಯದ ಕರ್ಮಯೋಗಿ ಸ್ವಾಮಿ ಪ್ರಭಾನಂದರು (ಕೇತಕಿ) ತಮ್ಮ ಶರೀರ ತ್ಯಾಗ ಮಾಡಿದ್ದಾರೆಂದು ದುಃಖದ ವಾರ್ತೆ ಬಂದಿತು. ಹಿಂದೊಮ್ಮೆ ಖಾಸಿಯಾಗಳ (ಪರ್ವತದ ಆದಿವಾಸಿಗಳು) ಶಿಕ್ಷಣರಾಹಿತ್ಯ ದುರವಸ್ಥೆ ಮತ್ತು ಗುಂಪು ಗುಂಪಾಗಿ ನಡೆಯುವ ಮತಾಂತರವನ್ನು ಕಂಡು ಈ ತರುಣ ಸೇವಕನ ಮನನೊಂದಿತು. ಯಾವುದೇ ಸಹಾಯವಿಲ್ಲದಿದ್ದರೂ ಕೂಡ ಖಾಸಿಯಾಗಳ ಸೇವೆಗಾಗಿ ಟೊಂಕಕಟ್ಟಿ ಅವರಲ್ಲಿಯೇ ನೆಲೆಸಿಬಿಟ್ಟಿದ್ದರು. ಇವರ ಪ್ರಯತ್ನದಿಂದ ಕೆಲವು ವರ್ಷಗಳಲ್ಲಿಯೇ ಅಲ್ಲಿಯ ಕೆಲವು ಗ್ರಾಮಗಳಲ್ಲಿ ವಿದ್ಯಾಲಯಗಳು ಸ್ಥಾಪಿಸಲ್ಪಟ್ಟವು. ಈ ನಿಃಸ್ವಾರ್ಥ ಸಂನ್ಯಾಸಿಯ ನೈಜಪ್ರೇಮ, ತ್ಯಾಗ ಮತ್ತು ಸೇವೆ ಅಲ್ಲಿಯ ಜನರ ಹೃದಯವನ್ನು ಗೆದ್ದಿತ್ತು. ಹಗಲು ರಾತ್ರಿಯೆನ್ನದೆ ಕಠೋರ ಪರಿಶ್ರಮದಲ್ಲಿ ತೊಡಗಿದ್ದ ಅವರಿಗೆ ಅನೇಕ ವೇಳೆ ಪುಷ್ಟಿಕರವಾದ ಆಹಾರವೂ ದೊರೆಯುತ್ತಿರಲಿಲ್ಲ. ಆದರೆ ಅವರ ಹಸನ್ಮುಖವು ಮ್ಲಾನವಾದುದನ್ನು ಎಂದೂ ಯಾರೂ ಕಂಡಿರಲಿಲ್ಲ.

ವರ್ಷವು ಕೊನೆಗೊಳ್ಳುತ್ತಿರುವಾಗ ಇಬ್ಬರು ಪ್ರತಿಷ್ಠಿತ ಅತಿಥಿಗಳನ್ನು ಕರೆದುಕೊಂಡು ಸರ್ವಪಲ್ಲಿ ರಾಧಾಕೃಷ್ಣನ್ ಅವರು ಬೇಲೂರು ಮಠಕ್ಕೆ ಭೇಟಿ ಇತ್ತಿದ್ದರು. ಅವರಲ್ಲೊಬ್ಬರು 'ವಿಜಯನಗರಂ'ನ ರಾಜಮಾತೆ, ಮತ್ತೊಬ್ಬರು ಬರೋಡಾದ ಮಹಾರಾಜರು. ಸೆಕ್ರೆಟರಿಯಾದ ವಿರಜಾನಂದರು ಇವರನ್ನು ಆದರದಿಂದ ಸ್ವಾಗತಿಸಿದರು. ಅತಿಥಿಗಳಿಬ್ಬರೂ ಮಠವನ್ನು ನೋಡಿ, ಸಂನ್ಯಾಸಿಗಳೊಂದಿಗೆ ಮಾತುಕತೆಯಾಡಿ ಬಹಳ ಆನಂದಪಟ್ಟರು. ೧೯೩೭ರ ಡಿಸೆಂಬರ್ ೩೧ರಂದು ತಮ್ಮ ದಿನಚರಿಯಲ್ಲಿ ವಿರಜಾನಂದರು ಹೀಗೆ ಬರೆದಿದ್ದಾರೆ—

''ಹಲವಾರು ನೋವು-ನಲಿವಿನಿಂದ ತುಂಬಿದ ಹಳೆ ವರುಷವೇ, ವಿದಾಯ! ನವವರುಷಕ್ಕಿದೋ ಸ್ವಾಗತ.''

* * *

ದೇಶ-ವಿದೇಶದ ಬಹು ಪ್ರಖ್ಯಾತ ವಿಜ್ಞಾನಿಗಳು 'ವಿಜ್ಞಾನ ಕಾಂಗ್ರೆಸ್'ನ ಪ್ರಯುಕ್ತ ಕೊಲ್ಕತ್ತೆಯಲ್ಲಿ ಸೇರಿದ್ದರು. ಜಗದ್ವಿಖ್ಯಾತ ಮನೋವಿಜ್ಞಾನಿ ಪ್ರೊ. ಯೂಂಗ್‌ರವರು ೧೯೩೮ರ ಜನವರಿ ೨ರಂದು ಬೇಲೂರು ಮಠಕ್ಕೆ ಭೇಟಿಯಿತ್ತು ಸಂಧ್ಯಾರತಿಯನ್ನು ವೀಕ್ಷಿಸಿದರು. ಮತ್ತೊಂದು ದಿನ ಇವರು ಮಠಕ್ಕೆ ಬಂದು ವಿರಜಾನಂದರ ಉಪಸ್ಥಿತಿಯಲ್ಲಿ ತಾಂತ್ರಿಕ ಚಕ್ರ ಮತ್ತು ಪೂಜಾಕೃತ್ಯಗಳ ಬಗ್ಗೆ ಸಂನ್ಯಾಸಿಗಳೊಂದಿಗೆ ಚರ್ಚಿಸಿದರು. ಜನವರಿ ೮ರಂದು ಬ್ರಿಟನ್ನಿನ ಭೌತವಿಜ್ಞಾನಿಯಾದ ಸರ್ ಆರ್ಥರ್ ಎಡಿಂಗ್‌ಟನ್‌ರವರು ಮಠಕ್ಕೆ ಭೇಟಿಯಿತ್ತಿದ್ದರು.

ಮಂದಿರದ ಪ್ರತಿಷ್ಠಾಪನೆಯ ದಿನ ಹತ್ತಿರವಾಗುತ್ತಿತ್ತು (೧೪ನೇ ಜನವರಿ). ವಿರಜಾನಂದರು ಮಠದ ಮೂವರು ಹಿರಿಯ ಸಂನ್ಯಾಸಿಗಳೊಡಗೂಡಿ 'ಶ್ರೀರಾಮಕೃಷ್ಣ-ವೇದಾಂತ ಮಠ'ಕ್ಕೆ ಹೋಗಿ ಪೂಜ್ಯ ಅಭೇದಾನಂದರನ್ನು ಮಂದಿರದ ಪ್ರತಿಷ್ಠಾಪನೋತ್ಸವಕ್ಕೆ ಆಮಂತ್ರಿಸಿದರು. ಅವರು ಇವರೆಲ್ಲರನ್ನೂ ಸ್ನೇಹಪೂರ್ವಕವಾಗಿ ಬರಮಾಡಿಕೊಂಡು ಮಾತುಕತೆಯಾಡಿದರು. ಆಗ ಅಭೇದಾನಂದರ ಆರೋಗ್ಯ ಅಷ್ಟು ಚೆನ್ನಾಗಿರಲಿಲ್ಲ. ವೈದ್ಯರು ಅವರು ಓಡಾಡುವುದನ್ನು ನಿಷೇಧಿಸಿದ್ದರು. ಹೀಗಾಗಿ, ಅವರು ಉತ್ಸವಕ್ಕೆ ಬರಲಾಗುವುದಿಲ್ಲ ಎಂದು ತಿಳಿಸಿದರು.

ಮಠಾಧ್ಯಕ್ಷರಾದ ಪರಮಪೂಜ್ಯ ವಿಜ್ಞಾನಾನಂದರು ಜನವರಿ ೯ರಂದು ಬೇಲೂರು ತಲುಪಿದರು. ನವನಿರ್ಮಿತ ಮಂದಿರ ಮತ್ತು ಶ್ರೀರಾಮಕೃಷ್ಣ ಪ್ರತಿಮಾ-ಪ್ರತಿಷ್ಠಾಪನೆಯ ಸಂದರ್ಭದಲ್ಲಿ ಸಂಘದ ವಿವಿಧ ಶಾಖೆಗಳಿಂದ ಸುಮಾರು ೨೦೦ ಸಂನ್ಯಾಸಿ-ಬ್ರಹ್ಮಚಾರಿಗಳೂ, ಭಾರತದ ನಾನಾ ಪ್ರದೇಶಗಳಿಂದ ಬಹು ಸಂಖ್ಯೆಯಲ್ಲಿ ಭಕ್ತರೂ ಬೇಲೂರು ಮಠದಲ್ಲಿ ನೆರೆದಿದ್ದರು. ಮಂದಿರದ ಹತ್ತಿರದಲ್ಲೇ ಒಂದು ಸಭಾಮಂಟಪವನ್ನೂ ಅದರ ಪಕ್ಕದಲ್ಲೇ ಬಹುಸುಂದರವಾದ ಯಜ್ಞಮಂಟಪವನ್ನು ವೈದಿಕ ರೀತಿಯಲ್ಲಿ ನಿರ್ಮಿಸಲಾಗಿತ್ತು. ಈ ಯಜ್ಞಮಂಟಪದ ನಾಲ್ಕು ದಿಕ್ಕಿನಲ್ಲೂ ಚತುರ್ವೇದೀಯ ಯಜ್ಞಕುಂಡಗಳನ್ನು ಸ್ಥಾಪಿಸಲಾಗಿತ್ತು. ದಕ್ಷಿಣದಲ್ಲಿ-ಯಜು-ಅರ್ಧವೃತ್ತಾಕಾರ; ಉತ್ತರದಲ್ಲಿ-ಅಥರ್ವ-ಅಷ್ಟದಲಪದ್ಮಾಕಾರ; ಪಶ್ಚಿಮದಲ್ಲಿ- ಸಾಮ-ವೃತ್ತಾಕಾರ; ಪೂರ್ವದಲ್ಲಿ-ಋಕ್-ಚತುಷ್ಕೋಣ. ಅಲ್ಲದೆ ಈಶಾನ್ಯ ಕೋಣದಲ್ಲಿ ಆಚಾರ್ಯಕುಂಡವೆಂಬ ಮತ್ತೊಂದು ಚತುಷ್ಕೋಣ. ಈ ಯಜ್ಞಮಂಟಪದ ಮಧ್ಯದಲ್ಲಿ ರಂಗೋಲಿಯಿಂದ ಅಲಂಕೃತವಾದ ವೇದಿಕೆಯ ಮೇಲೆ ಪುಷ್ಪಮಾಲೆಗಳಿಂದ ಶೋಭಿತವಾದ ಶ್ರೀರಾಮಕೃಷ್ಣರ ಪ್ರತಿಕೃತಿಯನ್ನು ಸ್ಥಾಪಿಸಲಾಗಿತ್ತು. ಮಹಾರಾಷ್ಟ್ರದ ಎಂಟು ಮಂದಿ ವೇದಜ್ಞ ಬ್ರಾಹ್ಮಣರು ಮತ್ತು ಮೂವರು ಬಂಗಾಳಿ ಬ್ರಾಹ್ಮಣರು ಮಕರ ಸಂಕ್ರಾಂತಿಯ ಹಿಂದಿನ ದಿನ (೧೩-೧-೧೯೩೮) ಬಹಿರ್ಮಂಟಪದಲ್ಲಿ ಸ್ವಸ್ತಿವಾಚನ, ಸಂಕಲ್ಪ ಮುಂತಾದ ಪೂರ್ವಭಾವಿ ಅನುಷ್ಠಾನಗಳನ್ನು ಮುಗಿಸಿ ಯಜ್ಞ

ಮಂಟಪವನ್ನು ಪ್ರವೇಶಿಸಿದರು. ಮಂಟಪದ ನೈಋತ್ಯಕೋನದಲ್ಲಿ ವಾಸ್ತುಪುರುಷ, ಈಶಾನ್ಯಕೋನದಲ್ಲಿ ನವಗ್ರಹ, ಅಗ್ನಿಕೋನದಲ್ಲಿ ಕ್ಷೇತ್ರಪಾಲ ಮುಂತಾದ ದೇವದೇವಿಯರ ವಿಧಿವತ್ತಾದ ಪೂಜೆಯ ನಂತರ ವಾಸ್ತುಯಾಗ, ಗ್ರಹಯಾಗ, ರುದ್ರಯಾಗ, ದಿಕ್ಪಾಲಯಾಗಗಳು ಸಂದವು. ಅಂದಿನ ಸಂಜೆ ನವನಿರ್ಮಿತ ಮಂದಿರದಲ್ಲಿ ಗಣೇಶ ಪೂಜೆಯ ನಂತರ ಮೂರ್ತಿಯ ಶುದ್ಧೀಕರಣ ಹಾಗೂ ಮಹಾಭಿಷೇಕದ ದ್ರವ್ಯಗಳ ಶುದ್ಧಿಯೂ ಸಹ ನಡೆಯಿತು. ಅಂದಿನ ಪ್ರಾತಃ ಕಾಲದಲ್ಲಿ ಪ್ರಭುಪಾದ ಪ್ರಾಣಗೋಪಾಲ ಗೋಸ್ವಾಮಿಗಳು ನವಮಂದಿರದಲ್ಲಿ ಶ್ರೀಮದ್ಭಾಗವತವನ್ನು ಪಠಿಸಿದರು.

ಮಾರನೇ ದಿನವೇ ಮಕರಸಂಕ್ರಾಂತಿ (೧೪ನೇ ಜನವರಿ ೧೯೩೮). ಅಂದು ಪ್ರಾತಃ ಕಾಲವೇ ಶ್ರೀರಾಮಕೃಷ್ಣರ ಪವಿತ್ರ ಅಸ್ಥಿಯನ್ನು (ಆತ್ಮಾರಾಮನ ಸಂಪುಟ) ಹಳೆಯ ದೇವರಮನೆಯಿಂದ ಹೊಸ ಮಂದಿರಕ್ಕೆ ಮೆರವಣಿಗೆಯಲ್ಲಿ ಕರೆತರಲಾಗಿತ್ತು. ದಾರಿಯುದ್ದಕ್ಕೂ ಕೆಂಪು ವಸ್ತ್ರವನ್ನು ಹಾಸಿ, ಹೂವಿನ ದಳಗಳನ್ನು ಹರಡಲಾಗಿತ್ತು. ಎರಡು ಬದಿಯಲ್ಲೂ ಕರ್ಪೂರ ದೀಪ ಮತ್ತು ಧೂಪವನ್ನು ಹಿಡಿದು ಭಕ್ತರು ಸಾಲಾಗಿ ನಿಂತಿದ್ದರು. ಮೆರವಣಿಗೆಯ ಮುಂಭಾಗದಲ್ಲೊಬ್ಬರು ಪವಿತ್ರ ಗಂಗೋದಕವನ್ನು ಸಿಂಪಡಿಸುತ್ತ ಮುಂದುವರಿದಂತೆ ಸಂನ್ಯಾಸವೃಂದವು ಶಂಖಗಳನ್ನೂದುತ್ತ ಚಲಿಸಿದರು. ನಂತರ ಒಂದು ಗೋವು ಹಾಗೂ ಪೂರ್ಣಕುಂಭವನ್ನು ಒಯ್ಯಲಾಯಿತು. ವೇದಜ್ಞ ಬ್ರಾಹ್ಮಣರಿಂದ ವೇದ ಮಂತ್ರೋಚ್ಚಾರಣೆಯೂ, ಭಕ್ತರಿಂದ 'ಏಸೇಛೇ ನೂತನ್ ಮಾನುಷ್...' ಎಂಬ ಹಾಡು ಒಕ್ಕೊರಲಿನಲ್ಲಿ ಹಾಡಲ್ಪಟ್ಟಿತು.[೧] ಮೆರವಣಿಗೆಯ ಕೊನೆಯಲ್ಲಿ ಪೂಜ್ಯ ವಿಜ್ಞಾನಾನಂದರು ಶ್ರೀರಾಮಕೃಷ್ಣರ ಪವಿತ್ರ ಅಸ್ಥಿಸಂಪುಟವನ್ನು ವಿಶಾಲವಾದ ಛತ್ರಛಾಯೆಯಲ್ಲಿ ಹೊತ್ತು ನಡೆದರು. ಮೆರವಣಿಗೆಯು ಬೆಳಗ್ಗೆ ೬.೩೦ಕ್ಕೆ ಹೊಸ ಮಂದಿರವನ್ನು ತಲುಪಿತು. ಪೂಜ್ಯ ವಿಜ್ಞಾನಾನಂದರು 'ಆತ್ಮಾರಾಮನ ಸಂಪುಟ'ವನ್ನು ವೇದಿಕೆಯ ಮೇಲೆ ಸ್ಥಾಪಿಸಿದರು.

ಹೊರಮಂಟಪ, ಯಜ್ಞಮಂಟಪ ಹಾಗೂ ಮಂದಿರಗಳಲ್ಲಿ ನಾನಾಪ್ರಕಾರದ ಪೂಜೆ, ಹೋಮ, ಅಭಿಷೇಕಗಳು ರಾತ್ರಿ ಹತ್ತರವರೆಗೆ ನಡೆದವು. ಶ್ರೀಮಾತೆಯವರ, ಸ್ವಾಮಿ ವಿವೇಕಾನಂದರ ಮತ್ತು ಸ್ವಾಮಿ ಬ್ರಹ್ಮಾನಂದರ ಮಂದಿರಗಳನ್ನು ಈ ಸಂದರ್ಭದಲ್ಲಿ ವಿಶೇಷವಾಗಿ ಅಲಂಕರಿಸಲಾಗಿತ್ತು. ದಿನವಿಡೀ ನಡೆದ ಹರಿನಾಮ ಸಂಕೀರ್ತನೆ, ದೇವೀಗೀತೆ, ಮತ್ತು ಭಜನೆಗಳಿಂದ ಮಠದ ಪ್ರಾಂಗಣವು ಅನುರಣಿತವಾಗಿತ್ತು. ಅಂದಿನ ಉತ್ಸವಕ್ಕೆ ಬಡವ-ಬಲ್ಲಿದರೆಂಬ ಭೇದವಿಲ್ಲದೆ ಒಂದು ಲಕ್ಷ ಭಕ್ತಾದಿಗಳು ನೆರೆದಿದ್ದರು ಹಾಗೂ ೧೨ ಸಾವಿರ ಭಕ್ತರು ಪ್ರಸಾದವನ್ನು ಸ್ವೀಕರಿಸಿದ್ದರು. ರಾತ್ರಿ ಮಂದಿರವು ವಿಶೇಷವಾದ ದೀಪಾಲಂಕಾರದಿಂದ ಕಂಗೊಳಿಸುತ್ತಿತ್ತು. ಮಂದಿರದಲ್ಲಿ ರಾತ್ರಿ ದಶಮಹಾವಿದ್ಯೆಯ ಷೋಡಶೋಪಚಾರ ಪೂಜೆಯು ನಡೆದು, ಕೊನೆಯ ಯಾಮದಲ್ಲಿ ವಿರಜಾಹೋಮವು ಸಂಪನ್ನವಾಯಿತು. ಅಂದು ಒಂಬತ್ತು ಜನ ಬ್ರಹ್ಮಚರ್ಯ ದೀಕ್ಷೆಯನ್ನೂ, ಒಂಬತ್ತು ಬ್ರಹ್ಮಚಾರಿಗಳು ಸಂನ್ಯಾಸದೀಕ್ಷೆಯನ್ನೂ ಪಡೆದರು.

ಮಠಾಧ್ಯಕ್ಷರಾದ ಪೂಜ್ಯ ವಿಜ್ಞಾನಾನಂದರು ಉತ್ಸವಾದಿಗಳ ನಂತರ ೧೬ನೇ ಜನವರಿಯಂದು ಅಲಹಾಬಾದಿಗೆ ಹಿಂದಿರುಗಿದರು. ವಿರಜಾನಂದರು ಅಖಿಲಾನಂದರು ಮತ್ತು ಕೆಲವು ಸಂನ್ಯಾಸಿಗಳು ಮೋಟಾರ್ ಗಾಡಿ ಮಾಡಿಕೊಂಡು ಕೆಲವು ದಿನಗಳ ಮಟ್ಟಿಗೆ ಕಾಮಾರಪುಕುರ ಮತ್ತು ಜಯರಾಂಬಾಟಿಗೆ ಹೋಗಿ ಬಂದರು. ಅಮೇರಿಕೆಯ ಮಹಿಳೆಯರಾದ 'ಭಕ್ತಿ' ಮತ್ತು 'ಅನ್ನಪೂರ್ಣಾ' ಕೊಲ್ಕತ್ತೆಯ ಗ್ರ್ಯಾಂಡ್ ಹೋಟೇಲ್‌ನಲ್ಲಿ ಇಳಿದುಕೊಂಡಿದ್ದರು. ಈ ಇಬ್ಬರು ಮಹಿಳೆಯರು ವಿರಜಾನಂದರನ್ನು ಮತ್ತು ಇನ್ನೂ ಕೆಲವು ಸಂನ್ಯಾಸಿಗಳನ್ನು ತಾವು ಇಳಿದುಕೊಂಡಿದ್ದ ಸ್ಥಳಕ್ಕೆ ಆಮಂತ್ರಿಸಿದ್ದರು. ಅಲ್ಲಿಗೆ ಹೋಗಿದ್ದ ವಿರಜಾನಂದರು ಸ್ವಾಮೀಜಿಯ ಮತ್ತು ಮಠದ ಗತಕಾಲದ ಅನೇಕ ನೆನಪುಗಳನ್ನು ಅವರಲ್ಲಿ ಹಂಚಿಕೊಂಡು, ಅಲ್ಲಿ ನೆರೆದಿದ್ದವರನ್ನು ಆಪ್ಯಾಯನಗೊಳಿಸಿದರು.

ಕೊಲ್ಕತ್ತೆಯ 'ಆಲ್ಬರ್ಟ್ ಹಾಲ್'ನ ಮೇಲ್ಮಹಡಿಯ ಹಜಾರದಲ್ಲಿ ಶ್ರೀರಾಮಕೃಷ್ಣ ಶತಮಾನೋತ್ಸವದ ಪ್ರಧಾನ ಕಛೇರಿಯು ಕೆಲವು ವರ್ಷಗಳಿಂದ ನಡೆಯುತ್ತಿತ್ತು. ೨೯ನೇ ಜನವರಿಯಂದು ಅಲ್ಲಿ 'ರಾಮಕೃಷ್ಣ ಮಿಷನ್ ಕಲ್ಚರಲ್ ಇನ್ಸ್ಟಿಟ್ಯೂಟ್' ಎಂಬ ಹೊಸ ಸಂಸ್ಥೆಯ ಬುನಾದಿಯಾಯಿತು. ಅಂದಿನ ಸಮಾರಂಭದ ಸಭಾಧ್ಯಕ್ಷತೆಯನ್ನು ವಿರಜಾನಂದರು ನಿರ್ವಹಿಸಿದರು.

ಫೆಬ್ರವರಿಯಲ್ಲಿ ಕೊಲ್ಕತ್ತೆಯ ನಾಗರಿಕರ ಪರವಾಗಿ ಸ್ವಾಮಿ ಅಖಿಲಾನಂದರಿಗೆ ಮತ್ತು ಅಮೇರಿಕನ್ ಮಹಿಳೆಯರಿಬ್ಬರಿಗೆ ಆಲ್ಬರ್ಟ್ ಹಾಲ್‌ನಲ್ಲಿ ಅಭಿನಂದನಾ ಪತ್ರಗಳನ್ನು ನೀಡಲಾಯಿತು. ಕೊಲ್ಕತ್ತೆಯ ಕಾರ್ಪೊರೇಷನ್ನಿನ ಮೇಯರ್ ಆಗಿದ್ದ ಶ್ರೀ ಸನತ್ ಕುಮಾರ್ ರಾಯ್ ಚೌಧುರಿಯವರು ಈ ಸಭೆಯ ನೇತೃತ್ವವನ್ನು ವಹಿಸಿದ್ದರು. ಅಂದಿನ ಸಭೆಯಲ್ಲಿ ಸಮಾಜದ ಪ್ರತಿಷ್ಠಿತ ವ್ಯಕ್ತಿಗಳು ಉಪಸ್ಥಿತರಿದ್ದರು. ವಿರಜಾನಂದರೂ ಸಹ ಈ ಸಭೆಯಲ್ಲಿ ಪಾಲ್ಗೊಂಡಿದ್ದರು. ವಿಪುಲವಾಗಿ ನೆರೆದಿದ್ದ ಜನರ ಹರ್ಷೋದ್ಗಾರಗಳ ನಡುವೆ ಮೇಯರ್ ಅವರು ಎರಡೆರಡು ಅಭಿನಂದನಾ ಪತ್ರಗಳನ್ನು, ಮೂರು ಅಮೂಲ್ಯ ಆಧಾರಗಳಲ್ಲಿಟ್ಟು ಸ್ವಾಮಿ ಅಖಿಲಾನಂದರಿಗೆ, ಮಿಸೆಸ್ ಉರ್ಸ್ಟರ್ (ಅನ್ನಪೂರ್ಣಾ) ಮತ್ತು ಮಿಸ್ ರೂಬೆಲ್ (ಭಕ್ತಿ)ಗೆ ಸಮರ್ಪಿಸಿದರು. ಮೇಯರ್ ನೀಡಿದ ಭಾಷಣದ ಒಂದಂಶ ಹೀಗಿದೆ:

''ಅಮೇರಿಕಾದ ಈ ಇಬ್ಬರು ಮಹಿಳೆಯರು ೭ ಲಕ್ಷ ರೂಪಾಯಿಗಳನ್ನು ದಾನ ಮಾಡಿದ್ದಾರೆಂಬುದಷ್ಟೇ ಅಲ್ಲ, ದೂರದ

---

೧ ಅನಂತರ ಸಿಂಹಾಸನದಲ್ಲಿ ಅಲಂಕರಿಸಿದ ಶ್ರೀರಾಮಕೃಷ್ಣರ ಪ್ರತಿಕೃತಿಯು ಒಯ್ಯಲ್ಪಟ್ಟಿತು.

ಅಮೆರಿಕಾದಿಂದ ಭರತಖಂಡಕ್ಕೆ ಬಂದು ಸ್ವಾಮಿ ವಿವೇಕಾನಂದರ ಒಂದು ಕನಸನ್ನು ನನಸಾಗಿಸಲು ಸಕಲ ಪ್ರಯತ್ನಗಳನ್ನೂ ಮಾಡುತ್ತಿದ್ದಾರೆ... ಈ ಮಂದಿರವೇ ಅಮೇರಿಕಾ ಮತ್ತು ಭರತ ಖಂಡದ ಸಂಸ್ಕೃತಿ ಮತ್ತು ಆಧ್ಯಾತ್ಮಿಕತೆಯ ಚಿರಮಿಲನಸ್ಥಾನವಾಗಿ ಪರಿಣಮಿಸುತ್ತದೆ. ಈ ಮಂದಿರವೇ ಪ್ರಾಚ್ಯ ಮತ್ತು ಪಾಶ್ಚಾತ್ಯದ ಭಾವಧಾರೆಯ ಮೇಲೆ ವಿಶ್ವಭ್ರಾತೃತ್ವದ ಒಂದು ಅಭಿನವ ಪ್ರಭಾವವನ್ನು ಬೀರುತ್ತದೆ.''

೧೯೩೮ರ ಫೆಬ್ರವರಿ ೧೧ ರಂದು ಕೊಲ್ಕತ್ತೆಯ ಶಾರದೇಶ್ವರೀ ಆಶ್ರಮದಲ್ಲಿ ತಪಸ್ವಿನೀ ಗೌರೀಮಾತೆಯ ಜನ್ಮೋತ್ಸವದ ಆಚರಣೆಯಿತ್ತು. ಇದರಲ್ಲಿಯೂ ಸಹ ವಿರಜಾನಂದರು ಪಾಲ್ಗೊಂಡಿದ್ದರು. ಪೂಜ್ಯ ಮಾತಾಜಿಯವರು ಇದಾದ ನಂತರ ಕೇವಲ ಎರಡೂವರೆ ವಾರ ಮಾತ್ರ ಬದುಕಿದ್ದು ಫೆಬ್ರವರಿ ೨೮ರಂದು ಮಹಾಸಮಾಧಿಯನ್ನಪ್ಪಿದರು. ಕೊನೆಯದಾಗಿ ಅವರಿಗೆ ಶ್ರದ್ಧಾಂಜಲಿಯನ್ನರ್ಪಿಸಲು ವಿರಜಾನಂದರು ಕಾಶೀಪುರದ ಸ್ಮಶಾನಕ್ಕೆ ಹೋಗಿದ್ದರು.

ಶ್ರೀರಾಮಕೃಷ್ಣರ ೧೦೨ನೇ ಜನ್ಮೋತ್ಸವವು ಯಥಾರೀತಿ ಆಚರಿಸಲ್ಪಟ್ಟಿತು. ಮಠಾಧ್ಯಕ್ಷರಾದ ಶ್ರೀಮತ್ ಸ್ವಾಮಿ ವಿಜ್ಞಾನಾನಂದರು ಕೆಲವು ದಿನಗಳಿಗೆಂದು ಅಲಹಾಬಾದಿನಿಂದ ಬೇಲೂರು ಮಠಕ್ಕೆ ಬಂದಿದ್ದರು. ಅದೇ ಅವರ ಕೊನೆಯ ಭೇಟಿಯಾಯಿತು. ಏಕೆಂದರೆ ಇಲ್ಲಿಂದ ಹಿಂತಿರುಗಿದ ಅವರು ಅಲಹಾಬಾದಿನಲ್ಲಿ ತುಂಬ ಅಸ್ವಸ್ಥರಾದರು. ದಿನದಿನಕ್ಕೆ ಅವರ ಆರೋಗ್ಯ ಹದಗೆಡುತ್ತ ಹೋಯಿತು. ತಮ್ಮ ದೇಹದ ಕಡೆಗೆ ಲೇಶಮಾತ್ರದ ಗಮನವೂ ಅವರಿಗಿರಲಿಲ್ಲ. ಯಾವುದೇ ರೀತಿಯ ಔಷಧಗಳನ್ನೂ ತೆಗೆದುಕೊಳ್ಳುತ್ತಿರಲಿಲ್ಲ. ಸಂಪೂರ್ಣವಾಗಿ ಶ್ರೀರಾಮಕೃಷ್ಣರಲ್ಲಿ ಶರಣಾಗಿ ತಮ್ಮಿಚ್ಛೆಯನ್ನು ಅವರಿಚ್ಛೆಯಲ್ಲಿ ವಿಲೀನಗೊಳಿಸಿದ್ದರು. ೧೯೩೮ರ ಏಪ್ರಿಲ್ ೨೫ರಂದು ಸೋಮವಾರ ಅಪರಾಹ್ನ ೩.೨೦ಕ್ಕೆ ಅಲಹಾಬಾದಿನ ಶ್ರೀರಾಮಕೃಷ್ಣ ಮಠದಲ್ಲಿ ತಮ್ಮ ೭೦ನೇ ವಯಸ್ಸಿನಲ್ಲಿ ಬ್ರಹ್ಮಜ್ಞರಾದ ಸ್ವಾಮಿ ವಿಜ್ಞಾನಾನಂದರು ಮಹಾಸಮಾಧಿಯನ್ನೈದಿದರು.

ಪೂಜ್ಯ ವಿಜ್ಞಾನಾನಂದರ ತಿರೋಧಾನದ ನಂತರ ಸಂಘದ ಅಧ್ಯಕ್ಷತೆಯನ್ನು ಸ್ವಾಮಿ ಶುದ್ಧಾನಂದರಿಗೆ ಅರ್ಪಿಸಲಾಯಿತು. ಸ್ವಾಮಿ ಮಾಧವಾನಂದರು ಸೆಕ್ರೆಟರಿ ಸ್ಥಾನವನ್ನು ವಹಿಸಿಕೊಂಡರು. ಸ್ವಾಮಿ ವಿರಜಾನಂದರು ಸಹಾಧ್ಯಕ್ಷರಾಗಿ ನೇಮಿಸಲ್ಪಟ್ಟರು. ಈ ಬಾರಿ ಸುದೀರ್ಘ ಏಕಾಂತವಾಸಕ್ಕೆ ಸಮಯ ಬಂತೆಂದು ಭಾವಿಸಿದ ವಿರಜಾನಂದರು, ಬಹು ನಿರೀಕ್ಷೆಗಳನ್ನಿಟ್ಟುಕೊಂಡು ಮೇ ೨೮ಕ್ಕೆ ಶ್ಯಾಮಲಾತಾಲನ್ನು ತಲುಪಿದರು. ಧ್ಯಾನ, ಧಾರಣೆಯಲ್ಲಿ ಬಹಳ ಸಮಯವನ್ನು ಕಳೆಯತೊಡಗಿದರು. ಅಷ್ಟರಲ್ಲಿ 'ಮಠಾಧ್ಯಕ್ಷರಾದ ಸ್ವಾಮಿ ಶುದ್ಧಾನಂದರು ಅಕ್ಟೋಬರ್ ೨೩ರಂದು ದೇಹತ್ಯಾಗ ಮಾಡಿದ್ದಾರೆ' ಎಂಬ ದುಃಖವಾರ್ತೆಯು ಅಕ್ಟೋಬರ್ ೨೬ರಂದು ತಿಳಿದುಬಂತು.

ಓಹ್ ಬಾಲ್ಯ ಬಂಧು ಸುಧೀರ್! ಆಧ್ಯಾತ್ಮಿಕ ಜೀವನ ಪಥದ ಸುಖ-ದುಃಖ, ಆಸೆ-ನಿರಾಸೆ, ಉತ್ಸಾಹ-ಉದ್ದೀಪನೆಗಳ ಸಂಗಾತಿ, ಸ್ವಾಮಿ ವಿವೇಕಾನಂದರ ಪ್ರಿಯ ಶಿಷ್ಯ ಹಾಗೂ ಅವರ ಕೃತಿಗಳ ವಂಗಾನುವಾದಕ, ಬಹುಶಾಸ್ತ್ರಜ್ಞ, ವಾಗ್ಮಿ, ಜ್ಞಾನ ಮತ್ತು ಕರ್ಮಗಳ ಸಮನ್ವಯ ಯೋಗಿ ಇವರೇ ಬಹುಜನರ ಗೌರವಕ್ಕೆ ಪಾತ್ರರಾದಂತಹ ಸ್ವಾಮಿ ಶುದ್ಧಾನಂದರು. ೧೯೩೨ರ ಡಿಸೆಂಬರ್ ೧೨ ರಂದು ಬೇಲೂರು ಮಠದಿಂದ ವಿರಜಾನಂದರಿಗೆ ಬರೆದ ಪತ್ರ :

ಸೋದರ ಕಾಳೀಕೃಷ್ಣ,

ಬಹುಕಾಲದ ನಂತರ ನವೆಂಬರ್ ೨೮ರಂದು ನೀನು ೨೩ನೇ ದಿನಾಂಕದಂದು ಶ್ಯಾಮಲಾತಾಲ್‌ನಿಂದ ಬರೆದ ಪತ್ರವನ್ನು ನೋಡಿ ತುಂಬ ಆನಂದವಾಯಿತು. ನಾನೂ ಸಹ ಬಹಳ ದಿನಗಳಿಂದ ಯಾವುದೇ ಪತ್ರ ಬರೆದಿಲ್ಲ, ಅದಕ್ಕಾಗಿ ನೀನು ತಪ್ಪು ತಿಳಿಯುವುದಿಲ್ಲವೆಂದು ಭಾವಿಸುವೆ. ನಿನ್ನ ಕ್ಷೇಮ ಸಮಾಚಾರಗಳು ನನಗೆ ಆಗಾಗ ಸಿಗುತ್ತಿರುತ್ತವೆ. ಅನುಕೂಲವಾದಾಗ ವಿಜಯ[2]ನಲ್ಲಿಗೆ ಹೋಗುತ್ತಿರುತ್ತೇನೆ. ಶಶಿ[3]ಯೂ ಸಹ ಮಠಕ್ಕೆ ಆಗಾಗ ಬರುತ್ತಿರುತ್ತಾನೆ... ನೀನೀಗ ಅಲ್ಲಿ ಒಬ್ಬಂಟಿಗನಾಗಿಬಿಟ್ಟಿರುವೆ. ಇದರಿಂದ ನಿನಗೆ ಹೆಚ್ಚು ದುಡಿತ. ಅದರಲ್ಲೇ ನಿನಗೆ ಹೆಚ್ಚು ಆನಂದ ಮತ್ತು ಆರೋಗ್ಯ. ಇದನ್ನು ನಾನು ನಿನ್ನೊಂದಿಗೆ ಶ್ಯಾಮಲಾತಾಲ್‌ನಲ್ಲಿದ್ದಾಗಲೇ ತಿಳಿದುಕೊಂಡಿರುವೆ, ನೀನೇ ಸ್ವತಃ ಹೇಳಿರುವೆ ಸಹ.[4]

''೧೯೩೦ನೇ ದುರ್ಗಾಪೂಜೆಯ ನಂತರ ಅಕ್ಟೋಬರ್ ೫ ರಂದು ನಾನು ಕಾಶಿಗೆ ಹೋದೆ. ನೀನೂ ಸಹ ನವೆಂಬರ್ ೧೫ರಂದು ಶ್ಯಾಮಲಾತಾಲಿಗೆ ಹೊರಟೆ, ಇದಾದ ನಂತರ ನಮ್ಮಿಬ್ಬರ ಭೇಟಿಯೇ ಆಗಿಲ್ಲ. ಎರಡು ವರ್ಷಕ್ಕೂ ಮೇಲಾಯಿತು. ಮತ್ತೆ ಯಾವಾಗ ಭೇಟಿಯಾಗಲಿದ್ದೇವೆಯೋ ದೇವರಿಗೇ ಗೊತ್ತು. ಎಲ್ಲ ವಿಘ್ನಗಳನ್ನೂ ಕಳೆದು ನಿನ್ನನ್ನು ಅತಿಶೀಘ್ರವಾಗಿ ನಮ್ಮ ಬಳಿಗೆ ಕರೆತರಲಿ ಎಂದು ಆ ದೇವರಲ್ಲಿ ನನ್ನ ಪ್ರಾರ್ಥನೆ....

''ಖೋಕಾ ಮಹಾರಾಜರು ಡಿಸೆಂಬರ್ ೨ರಂದು ಅಪರಾಹ್ನ ೩.೦೫ಕ್ಕೆ ತಮ್ಮ ನಶ್ವರ ದೇಹವನ್ನು ತ್ಯಜಿಸಿ ಶ್ರೀರಾಮಕೃಷ್ಣರ ಪಾದಪದ್ಮವನ್ನು ಸೇರಿಕೊಂಡರು ಎಂಬ ವಿಷಯವನ್ನು ನೀನು ಖಂಡಿತವಾಗಿ ತಿಳಿದಿರುವೆ. ಅಂದು ಬೆಳಗ್ಗೆ ನಾನವರನ್ನು ನೋಡಲು ಹೋಗಿದ್ದೆ. ನನ್ನನ್ನು ನೋಡುತ್ತಲೇ ಅವರು, 'ಏನು ಶುದ್ಧಾನಂದ, ಹೇಗಿರುವೆ?' ಎಂದರು. ಅಷ್ಟರಲ್ಲೇ ಚಹಾದ ಘಂಟೆ ಬಾರಿಸಿತು. ಅದನ್ನು ಕೇಳಿ, 'ಇದೋ ನಿಮ್ಮ ಚಹಾ ಗಂಟೆ ಬಾರಿಸಿತು' ಎಂದರು. ಕೆಲವು ದಿನಗಳಿಂದ ಅವರ ರೋಗವು ವಿಷಮಿಸಿದ್ದರೂ, ಯಾರು ಭಾವಿಸಿದ್ದರು, ಅಂದೇ ಅವರ ದೇಹತ್ಯಾಗ ಎಂದು?

---

೨ ವಿರಜಾನಂದರ ಸಹೋದರ ವಿಜಯ ಕೃಷ್ಣ ಬಸು.

೩ ವಿರಜಾನಂದರ ಮತ್ತು ಶುದ್ಧಾನಂದರಿಬ್ಬರ ಬಾಲ್ಯ ಸಖ, ಶ್ರೀಮಾತೆಯವರ ಶಿಷ್ಯ ಶಶಿಭೂಷಣ ದಾಸ್

೪ ಸ್ವಾಮಿ ಶುದ್ಧಾನಂದರು ೧೯೨೯ರಲ್ಲಿ ಮೊದಲ ಬಾರಿಗೆ ಶ್ಯಾಮಲಾತಾಲ್ ಗೆ ಹೋಗಿದ್ದರು.

ಎಲ್ಲವೂ ದೇವರ ಇಚ್ಛೆ! ....ಖೋಕಾ ಮಹಾರಾಜರು ಬಹಳಷ್ಟು ದಿನಗಳಿಂದ ರಾಮಕೃಷ್ಣ ಮಿಷನ್ನಿನ ಕೋಶಾಧ್ಯಕ್ಷರಾಗಿ (treasurer) ನೇಮಿತರಾಗಿದ್ದರು. ಆ ಸ್ಥಳವು ರಿಕ್ತವಾದ್ದರಿಂದ ಎಲ್ಲರೂ ಒಮ್ಮತದಿಂದ ನೀನೇ ಸರ್ವರೀತಿಯಿಂದಲೂ ಯೋಗ್ಯ ನೆಂದು ವಿವೇಚಿಸಿ ನಿನ್ನನ್ನು ಆ ಸ್ಥಾನಕ್ಕೆ ಆಯ್ಕೆ ಮಾಡಿದ್ದಾರೆ. ...ಸೋದರ, ಮಿಷನ್ನಿನ ಸಂಕಟದ ಪರಿಸ್ಥಿತಿಯಲ್ಲಿ ನೀನೆಲ್ಲಿದ್ದರೂ ಸರಿ ಬರುವೆಯೆಂದು ನನಗೆ ಹೇಳಿದ್ದೆ. ಈಗ ಅಂಥದೊಂದು ಪರಿಸ್ಥಿತಿ ಎದುರಾಗಿದೆ. ಆದ್ದರಿಂದ ಬರಲು ತಡಮಾಡಬೇಡ. ...treasurer ಆಗಲು ನಿನಗಿಂತ ಯೋಗ್ಯರಾದ ಟ್ರಸ್ಟಿಗಳಾಗಲಿ, ಸಾಧುಗಳಾಗಲೀ ಯಾರೂ ಇಲ್ಲ ಎಂಬುದೇ ನಮ್ಮೆಲ್ಲರ ಅಭಿಮತ. ಆದ್ದರಿಂದ ನೀನು ಸರಕು-ಸರಂಜಾಮುಗಳೊಡನೆ ಬರುವ ದಿನಾಂಕವನ್ನು ತಿಳಿಸಿ ನಮ್ಮೆಲ್ಲರನ್ನೂ ಸಂತೋಷಪಡಿಸು.... ಮಹಾಪುರುಷ್ ಮಹಾರಾಜರ ಆರೋಗ್ಯ ತಕ್ಕಮಟ್ಟಿಗಿದೆ. ಶ್ರೀರಾಮಕೃಷ್ಣರ ಶಿಷ್ಯರ ಪೈಕಿ ಈಗ ಅವರೇ ನಮ್ಮೆಲ್ಲರ ಭರವಸೆಯ ಕೇಂದ್ರವಾಗಿದ್ದಾರೆ.''

ಇಂತಿ ಪ್ರೀತಿಗಳೊಂದಿಗೆ ನಿನ್ನ

ಶುದ್ಧಾನಂದ

ಇದು ಆರು ವರ್ಷಗಳ ಹಿಂದಿನ ಪತ್ರ. ನಮ್ಮೆಲ್ಲರ ಭರವಸೆಯ ಕೇಂದ್ರ ಎಂದು ಉಲ್ಲೇಖಿಸಲ್ಪಟ್ಟಿದ್ದ ಪೂಜ್ಯ ಮಹಾಪುರುಷ್ ಮಹಾರಾಜರೂ ಸಹ ಇಂದು ಇಲ್ಲ. ಅವರ ನಂತರ ಶ್ರೀರಾಮಕೃಷ್ಣರ ಇಬ್ಬರು ಶಿಷ್ಯರು, ಸ್ವಾಮಿ ಅಖಂಡಾನಂದರು ಮತ್ತು ಸ್ವಾಮಿ ವಿಜ್ಞಾನಾನಂದರೂ ಸಹ ಸ್ವಲ್ಪ ಕಾಲ ಈ ಮಹಾಸಂಘದ ನಾಯಕರಾಗಿದ್ದು ಈ ಧರೆಯನ್ನು ತ್ಯಜಿಸಿದ್ದರು. ಸಂಘವು ಬಹು ಆಸೆಗಳನ್ನಿಟ್ಟುಕೊಂಡು ಸ್ವಾಮಿ ಶುದ್ಧಾನಂದರನ್ನು ಅಧ್ಯಕ್ಷ ಸ್ಥಾನದಲ್ಲಿ ಕುಳ್ಳಿರಿಸಿತು. ಅವರೂ ಸಹ ಇಂದು ಜೀವನದ ಮತ್ತೊಂದು ದಡವನ್ನು ಸೇರಿ ಅದೃಶ್ಯರಾದರು. ಭರಿಸಲಾರದ ಶೂನ್ಯತೆಯ ಛಾಯೆಯು ವಿರಜಾನಂದರ ಮನವನ್ನು ಮುಸುಕಿತು. ಈ ಬಾರಿ ಇನ್ನು ಬಿಡುಗಡೆ ಸಿಗದು, ಸಂಘದ ಬೃಹತ್ ಜವಾಬ್ದಾರಿಯನ್ನು ಈಗ ಹೊರಬೇಕಾಗಿದೆ ಎಂಬುದು ಅವರ ಅರಿವಿಗೆ ಬಂದಿತು. ಆದರೂ ಯಾವಾಗಲೂ ಘೋಷಿಸಿಕೊಂಡು ಬಂದಂತಹ ಏಕಾಂತ ವಾಸದ ಆಕಾಂಕ್ಷೆಯು ತಲೆಯೆತ್ತಿ, ''ಇಲ್ಲ , ಇಲ್ಲ , ಇದು ಸಾಧ್ಯವೇ ಇಲ್ಲ. ಇಷ್ಟು ಕಠಿಣವಾದ ಜವಾಬ್ದಾರಿಯನ್ನು ಹೊರುವ ಶಕ್ತಿ ನನ್ನಲ್ಲಿ ಇಲ್ಲವೇ ಇಲ್ಲ. ಹೇ ಶ್ರೇಷ್ಠ ಸೇನಾಪತಿ, ಅನೇಕ ಸಂಗ್ರಾಮಗಳಲ್ಲಿ ಯುದ್ಧ ಮಾಡಿಸಿದೆ, ಇನ್ನೂ ಏಕೆ? ಸಾಕು, ಈಗ ಬಿಡುಗಡೆ ನೀಡು'' ಎಂದು ಅವರ ಒಳಮನಸ್ಸು ಚೀರಿತು.

ಮಠದಿಂದ ಕಳುಹಿಸಲ್ಪಟ್ಟಿದ್ದ 'ಅಧ್ಯಕ್ಷತೆಯನ್ನು ಸ್ವೀಕರಿಸಿ' ಎಂಬ ಬೇಡಿಕೆಯಿದ್ದ ಮೂರು ತಂತಿಗಳಿಗೂ ಇವರದ್ದು ನಕಾರವೇ ಉತ್ತರವಾಯಿತು. ಟ್ರಸ್ಟಿಗಳಿಂದ ವೈಯಕ್ತಿಕವಾಗಿಯೂ, ಸಾಮೂಹಿಕವಾಗಿಯೂ ಪತ್ರಗಳು ಬರಲಾರಂಭಿಸಿದವು. ಇವುಗಳಿಗೂ ವಿರಜಾನಂದರು ಬಗ್ಗಲಿಲ್ಲ. ಮತ್ತೆ ಸಂಘದ ಆಂತರಿಕವಾದ ಕರೆ ಬಂದಿತು! ಇನ್ನವರಿಗೆ ನಿರಾಕರಿಸಲು ಸಾಧ್ಯವಾಗಲಿಲ್ಲ. ೧೯೩೮ರ ನವೆಂಬರ್ ೧೯ರಂದು ತಮ್ಮ ಸಮ್ಮತಿಯನ್ನು ತಿಳಿಸುತ್ತ ತಂತಿಯನ್ನು ಕಳುಹಿಸಿದರು —

''Accepted for Sangha's sake. Crave Thakur's blessings.'' — ''ಸಂಘದ ಸಲುವಾಗಿ ಸ್ವೀಕರಿಸಿರುವೆ, ರಾಮಕೃಷ್ಣರ ಆಶೀರ್ವಾದಕ್ಕಾಗಿ ಹಂಬಲಿಸುವೆ.''

ಸ್ವಾಮೀಜಿಯವರ ಸಂನ್ಯಾಸೀ ಶಿಷ್ಯರಲ್ಲೊಬ್ಬರಾದ ಸ್ವಾಮಿ ಅಚಲಾನಂದಜೀಯವರು (ಕೇದಾರ್ ಬಾಬಾ) ಸಂಘದ ಸಹ ಉಪಾಧ್ಯಕ್ಷರಾಗಿ ನೇಮಿಸಲ್ಪಟ್ಟರು.

## ೧೭

ವಿರಜಾನಂದರು ೧೯೩೮ರ ಡಿಸೆಂಬರ್ ೭ರಂದು ಶ್ಯಾಮಲಾ ತಾಲ್‌ನಿಂದ ಹೊರಟು ಬೃಂದಾವನದ ಮೂಲಕ ಬೇಲೂರು ಮಠಕ್ಕೆ ಪ್ರಯಾಣಿಸಿದರು. ಬೃಂದಾವನದ ಸೇವಾಶ್ರಮದಲ್ಲಿ ಹೊಸ ಸಂಘಾಧ್ಯಕ್ಷರನ್ನು ಸಾಧು-ಬ್ರಹ್ಮಚಾರಿಗಳು ಸಾಂಪ್ರದಾಯಿಕವಾಗಿ ಎದುರುಗೊಂಡರು. ಅಲ್ಲಿಂದ ಹೊರಟು, ಕಾಶಿಯಲ್ಲಿ ಒಂದು ದಿನ ಇಳಿದುಕೊಂಡಿದ್ದು ಡಿಸೆಂಬರ್ ೧೧ರಂದು ಬೇಲೂರು ಮಠವನ್ನು ತಲುಪಿದರು. ಅವರೀಗ ಸಂಘಾಧ್ಯಕ್ಷರು ಶ್ರೀರಾಮಕೃಷ್ಣರ ಪ್ರತಿನಿಧಿ. ಮಠವಾಸಿಗಳ ಸಾದರದ ಸ್ವಾಗತ ಮತ್ತು ಅಭಿನಂದನೆಗಳು ಅವರ ಹೃದಯದಲ್ಲಿ ಅಪೂರ್ವ ಭಾವತರಂಗಗಳನ್ನು ಸೃಜಿಸಿದವು.

ಶ್ರೀರಾಮಕೃಷ್ಣ ಮಂದಿರದ ಬಾಕಿಯಿದ್ದ ಕೆಲಸವೂ ಸಹ ಪೂರ್ಣಗೊಂಡಿತ್ತು. ಆ ಮಹಾನ್ ಸೌಧದ ಕೆಳಗೆ-ಮೇಲೆ ಓಡಾಡಿ ಎಲ್ಲವನ್ನೂ ಪರೀಕ್ಷಿಸಿದರು. ಮಂದಿರದ ಉಪ್ಪರಿಗೆಯ ಮೊಗಸಾಲೆಯು ಧ್ಯಾನಾಭ್ಯಾಸಕ್ಕೆ ಒಳ್ಳೆಯ ಏಕಾಂತ ಸ್ಥಳ! ಇವೆಲ್ಲವನ್ನೂ ನೋಡಿ ವಿರಜಾನಂದರು ತುಂಬ ಆನಂದಿಸಿದರು.

ವಿವೇಕಾನಂದರ ಆಪ್ತಶಿಷ್ಯೆಯಾದ ಮಿಸ್ ಮ್ಯಾಕ್ಲಿಯಾಡ್ (ಸ್ವಾಮೀಜಿಯವರು ಈಕೆಗೆ 'ಜಯಾ' ಎಂಬ ಹೆಸರಿತ್ತಿದ್ದರು) ಆಗ ಮಠದ ಅತಿಥಿಗೃಹದಲ್ಲಿ ವಾಸಿಸುತ್ತಿದ್ದರು. ಅವರು ವಿರಜಾನಂದರನ್ನು ನೋಡಿ, ''ಇಂದು ನಿನ್ನನ್ನು ಮಠಾಧ್ಯಕ್ಷನನ್ನಾಗಿ ಕಂಡು ಬಹಳ ಸಂತೋಷವಾಗುತ್ತಿದೆ'' ಎಂದರು. ಶ್ಯಾಮಲಾ ತಾಲ್‌ನಲ್ಲಿ ಕೆಲವು ತಿಂಗಳು ವಿಶ್ರಾಂತಿ ಪಡೆದ ವಿರಜಾನಂದರ ಶರೀರವೂ ಸಹ ಕಾಂತಿಯಿಂದ ಕೂಡಿತ್ತು. ಮಿಸ್ ಮ್ಯಾಕ್ಲಿಯಾಡ್ ನಗುನಗುತ್ತ, ''ಬಹಳಕಾಲದ ನಂತರ ಮಠವು ದೀರ್ಘಕಾಲ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಬಲ್ಲಂತಹ ಒಬ್ಬರನ್ನು ಪಡೆಯಿತು'' ಎಂದರು.

*(ಮುಂದುವರಿಯುವುದು)*